# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಪ್ರಕಟಣೆ

**ದಿನಾಂಕಃ25.06.2025**

**ವಿಷಯ** ಃ ಗದಗ ಜಿಲ್ಲಾ ನ್ಯಾಯಾಲಯದ ಉಪಹಾರ ಗೃಹವನ್ನು ಬಾಡಿಗೆ ಆಧಾರ ಮೇಲೆ
ಲೈಸನ್ಸ ನಾತೆಯಿಂದ ನಡೆಸಲು ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ** ಃ ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು ಇವರ ಸಾಮಾನ್ಯ ಸುತ್ತೋಲೆ ಸಂಖ್ಯೆಃಐಅಂ.ಖ 200/2000, ದಿನಾಂಕ13.06.2005.

*****

ಗದಗ ಜಿಲ್ಲಾ ನ್ಯಾಯಾಲಯದ ಉಪಹಾರ ಗೃಹವನ್ನು ಲೈಸನ್ಸ್ ನಾತೆಯಿಂದ ಈ ಕೆಳಗೆ ಹೇಳಿರುವ ಷರತ್ತು, ನಿಬಂಧನೆಗಳಿಗೆ ಒಳಪಟ್ಟು ನೀಡಲು ಉದ್ದೇಶಿಸಿದ್ದು, ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವವರು ಸ್ವ ರಚಿತ ಅರ್ಜಿಯಲ್ಲಿ (ಬೆರಳಚ್ಚು ಮಾಡಿಸಿ) ತಮ್ಮ ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ, ಯಾವ ಯಾವ ತರಹದ ತಿಂಡಿ ತಿನಿಸು ಹಾಗೂ ಊಟವನ್ನು ತಯಾರಿಸುತ್ತೀರಿ ಅದರ ಪ್ರಮಾಣ ಮತ್ತು ದರ ಪಟ್ಟಿಯ ಸಮೇತವಾಗಿ ಸ್ಪಷ್ಟವಾಗಿ ನಮೂದಿಸಿ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹುಬ್ಬಳ್ಳಿ ರೋಡ, ಗದಗ ಈ ವಿಳಾಸಕ್ಕೆ ದಿನಾಂಕ **11.07.2025** ರ ಸಾಯಂಕಾಲ **04.30** ಘಂಟೆಯ ಒಳಗಾಗಿ ಖುದ್ದಾಗಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು** ಃ

1. ಆಹಾರದ ಗುಣಮಟ್ಟ, ಆಹಾರ ಪದಾರ್ಥಗಳು ಹಾಗೂ ಕೆಲಸದ ಸ್ವಚ್ಛತೆ ಬಗ್ಗೆ ತಪಾಸಣೆಯನ್ನು ಕಾಲಕಾಲಕ್ಕೆ ಸಂಬಂಧಿಸಿದ ಇಲಾಖೆಯಿಂದ ಮಾಡಿಸುವುದು.
2. ಉಪಹಾರ ಗೃಹವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯವರಿಂದ ಲೈಸನ್ಸ ಸ್ವಂತ ಪಡೆದು ಆರಂಭಿಸಬೇಕು.
3. ಉಪಹಾರ ಗೃಹದಲ್ಲಿ ಸಸ್ಯಾಹಾರಿ ಪದಾರ್ಥಗಳನ್ನು ಮಾತ್ರ ತಯಾರಿಸಬೇಕು.
4. ಉದ್ಯೋಗಕ್ಕೆ ಸಂಬಂಧಿಸಿದ ಎಲ್ಲಾ ತೆರಿಗೆಗಳನ್ನು ಕಟ್ಟತಕ್ಕದ್ದು.
5. ಉತ್ತಮ ಗುಣಮಟ್ಟದ ಸ್ವಚ್ಛ ಕಾಣುವ ಹೊಸ ಶೈಲಿಯ ಪಿಠೋಪಕರಣ ಹಾಗೂ ಶೋಕೇಸಗಳನ್ನು ಬಳಸಬೇಕು.
6. ಉಪಹಾರ ಗೃಹದ ಮಂಜೂರಾತಿಯು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಗದಗ ಇವರ ವಿವೇಚನಾ ಅಧಿಕಾರಕ್ಕೆ ಒಳಪಟ್ಟಿರುತ್ತದೆ.
7. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು ತಮ್ಮ ವ್ಯವಹಾರಕ್ಕೆ ಅಗತ್ಯವಾದ ನೀರಿನ ವ್ಯವಸ್ಥೆಯನ್ನು ತಮ್ಮ ಖರ್ಚಿನಲ್ಲಿ ತಾವೇ ಮಾಡಿಕೊಳ್ಳತಕ್ಕದ್ದು.

8. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು ಪ್ರತ್ಯೇಕವಾದ ಮೀಟರಿನ ರೀಡಿಂಗ್ ಅನ್ವಯ ಮಾಸಿಕ ವಿದ್ಯುತ್ ಬಿಲ್ಲನ್ನು ಹಾಗೂ ತ್ಯಾಜ್ಯ ವಿಲೇವಾರಿ ವೆಚ್ಚವನ್ನು ತಾವೇ ಭರಿಸಬೇಕು.
9. ಉಪಹಾರ ಗೃಹ ಮಂಜೂರಾದವರು, ಬೇರೆಯವರಿಗೆ ಉಪ ಬಾಡಿಗೆ ಹಾಗೂ ಪರಭಾರೆ ಮಾಡುವುದನ್ನು ನಿಷೇಧಿಸಿದೆ.
10. ಉಪಹಾರ ಗೃಹ ಮಂಜೂರಾದವರು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸಬೇಕು. ಅನ್ಯ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.
11. ಉಪಹಾರ ಗೃಹ ಮಂಜೂರಾದವರು ಬೆಳಿಗ್ಗೆ 9–00 ಗಂಟೆಯಿಂದ ಸಾಯಂಕಾಲ 6–00 ರವರೆಗೆ ಮಾತ್ರ ನಡೆಸಬೇಕು. ಸರ್ಕಾರಿ ರಜೆ ದಿನಗಳಲ್ಲಿ ಮಳಿಗೆಯನ್ನು ತೆರೆಯತಕ್ಕದ್ದಲ್ಲ.
12. ಉಪಹಾರ ಗೃಹ ಒಪ್ಪಂದವಾದ ನಂತರ ಯಾವುದೇ ಕಾರಣಕ್ಕೆ ಭಾಡಿಗೆ ದರಗಳಲ್ಲಿ ಬದಲಾವಣೆ ಮಾಡಬೇಕೆನ್ನುವ ಕೋರಿಕೆಗಳನ್ನು ಮನ್ನಿಸಲಾಗುವುದಿಲ್ಲ.
13. ಉಪಹಾರ ಗೃಹ ಮಂಜೂರಾದವರು ಆ ಕಟ್ಟಡದಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಕೂಡದು. ಉಪಹಾರ ಗೃಹ ಅಥವಾ ಅದರ ಕಟ್ಟಡಕ್ಕೆ ಯಾವುದೇ ರೀತಿಯಲ್ಲಿ ಹಾನಿ ಮಾಡಿದರೆ ಅಥವಾ ಇನ್ನಿತರೆ ನಷ್ಟವಾದಲ್ಲಿ, ಅಂತಹ ನಷ್ಟ ಭರ್ತಿ ಹಣವನ್ನು ಅರ್ಜಿದಾರರ ಭದ್ರತಾ ಠೇವಣಿಯಿಂದ ಮುರಿದುಕೊಳ್ಳಲಾಗುವುದು.
14. ಉಪಹಾರ ಗೃಹ ಮಂಜೂರಾದವರು ಅಗತ್ಯ ಸುರಕ್ಷಾ ಕ್ರಮಗಳನ್ನು ಅವಶ್ಯವಾಗಿ ತಮ್ಮ ಖರ್ಚಿನಲ್ಲಿ ಅಳವಡಿಸಕೊಳ್ಳತಕ್ಕದ್ದು .
15. ಉಪಹಾರ ಗೃಹ ಮಂಜೂರಾತಿ ಪಡೆದ ಮೇಲೆ ನಂತರ ಕೆಲಸ ನಿರ್ವಹಿಸಲು ಅಸಮರ್ಥರಾದಲ್ಲಿ ಅವರ ಭದ್ರತಾ ಠೇವಣಿಯಿಂದ ಮುರಿದುಕೊಳ್ಳಲಾಗುವುದು.
16. ಅರ್ಜಿದಾರರು ಉಪಹಾರ ಗೃಹದ ಮಂಜೂರಾತಿ ಸೂಚನೆ ಅಂಚೆ ಮೂಲಕ ಸ್ವಿಕೃತಿಯಾದ ಮೂರು ದಿನಗಳ ಒಳಗೆ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಗದಗ ಇವರ ಹುದ್ದೆಯ ಹೆಸರಿಗೆ ಈ ಕಚೇರಿಯಲ್ಲಿ ಮೂರು ವರ್ಷಗಳ ಅವಧಿಗೆ ಒಪ್ಪಂದ ಪತ್ರವನ್ನು ಮಾಡಿಕೊಳ್ಳಬೇಕು.
17. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು ಸ್ಟಾಂಪ್ ಅಳತೆಯ ಎರಡು ಭಾವಚಿತ್ರಗಳನ್ನು, ಆಧಾರ್ ಅಥವಾ ಮತದಾರರ ಚೀಟಿಯ ಪ್ರತಿಯನ್ನು ಮತ್ತು ಉಪಹಾರ ಗೃಹವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯವರಿಂದ ಲೈಸನ್ಸ ಸ್ವಂತ ಪಡದುಕೊಂಡಿರಬೇಕು ಮತ್ತು ಒದಗಿಸಬೇಕು.

18. ಗದಗ ಜಿಲ್ಲಾ ನ್ಯಾಯಾಲಯದಲ್ಲಿನ ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು ಭದ್ರತಾ ಠೇವಣಿಯಾಗಿ ರೂ.20,000/– (ರೂ. ಇಪ್ಪತ್ತು ಸಾವಿರ) ಮೌಲ್ಯದ ಡಿ.ಡಿ. ಯನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಗದಗ ಇವರ ಹೆಸರಿನಲ್ಲಿ ಅಗ್ರಿಮೆಂಟ್ ಮಾಡಿಕೊಳ್ಳುವ ಕಾಲಕ್ಕೆ ಸಲ್ಲಿಸಬೇಕು. ಭದ್ರತಾ ಠೇವಣಿ ಹಣಕ್ಕೆ ಬಡ್ಡಿ ಕೊಡಲಾಗುವುದಿಲ್ಲ.

19. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು ಗೃಹವನ್ನು ಸ್ವಚ್ಛವಾಗಿ, ಶಿಸ್ತಾಗಿ ಇಟ್ಟುಕೊಳ್ಳತಕ್ಕದ್ದು ಹಾಗೂ ಸುತ್ತ ಮುತ್ತಲಿನ ಪರಿಸರ, ನೈರ್ಮಲ್ಯ ಕಾಪಾಡಿಕೊಳ್ಳತಕ್ಕದ್ದು.

20. ಉಪಹಾರ ಗೃಹ ಮಂಜೂರಾದವರು ಮಾಸಿಕ ಲೈಸನ್ಸ್ ಶುಲ್ಕವನ್ನು ಪ್ರತಿ ತಿಂಗಳ 10 ನೇ ತಾರೀಖಿನ ಒಳಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಗದಗ ಕಚೇರಿಯ ಲೆಕ್ಕಪತ್ರ ವಿಭಾಗದ ಶಿರಸ್ತೇದಾರರಲ್ಲಿ ಪಾವತಿಸತಕ್ಕದ್ದು.

21. ಗದಗ ಜಿಲ್ಲಾ ನ್ಯಾಯಾಲಯದಲ್ಲಿನ ಉಪಹಾರ ಗೃಹ ಮಂಜೂರಾದವರು ಖಾಲಿ ಮಾಡುವಾಗ ಅವರ ಭದ್ರತಾ ಠೇವಣಿ ರೂ.20,000/– (ರೂ. ಇಪ್ಪತ್ತು ಸಾವಿರ) ಮೊತ್ತವನ್ನು ಹಿಂದಿರುಗಿಸುವಾಗ ಅರ್ಜಿದಾರರಿಂದ ಹಣ ಬರಬೇಕಾದಲ್ಲಿ ವಿದ್ಯುತ್ ಬಿಲ್ಲಿನ ಮೊತ್ತ ಬಾಕಿ ಇದ್ದಲ್ಲಿ ಮೇಲಿನ ಠೇವಣಿಯ ಮೊತ್ತದಲ್ಲಿ ಮುರಿದುಕೊಳ್ಳಲಾಗುವುದು.

22. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಇವರಿಗೆ ಸ್ಥಳದ ಅವಶ್ಯಕತೆ ಕಂಡು ಬಂದಾಗ ಅವರು ನೋಟಿಸು ಕಳುಹಿಸಿದ 15 ದಿನಗಳೊಳಗಾಗಿ ಉಪಹಾರ ಗೃಹ ಮಂಜೂರಾತಿ ಪಡೆದವರು ಖಾಲಿ ಮಾಡಿಕೊಡತಕ್ಕದ್ದು.

23. ಉಪಹಾರ ಗೃಹ ಮಂಜೂರಾತಿ ಪಡೆದವರು ಹಾಗೂ ನ್ಯಾಯಾಲಯದ ಆವರಣದಲ್ಲಿ ಯಾವುದೇ ವ್ಯಕ್ತಿಗಳಿಗೆ, ಆಸ್ತಿಗೆ ಹಾನಿಯುಂಟು ಮಾಡಬಲ್ಲ, ಅಗ್ನಿ ಸಂಭವಿಸಬಲ್ಲ, ಸಾರ್ವಜನಿಕರಿಗೆ ತೊಂದರೆ ನೀಡುವಂತಹ, ಉಪದ್ರವಕ್ಕೆ ಕಾರಣವಾಗುವ ಹಾಗೂ ಕಾನೂನಾತ್ಮಕವಾಗಿ ನಿಷೇಧಿಸಲಾದ ಯಾವುದೇ ವಸ್ತುಗಳನ್ನು ಶೇಖರಿಸಿಡಬಾರದು.

24. ಉಪಹಾರ ಗೃಹ ಮಂಜೂರಾತಿ ನಂತರ ಯಾವುದೇ ಅವ್ಯವಹಾರಗಳಲ್ಲಿ ಅಥವಾ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವರೆಂದು ಕಂಡುಬಂದಲ್ಲಿ ಸದರಿಯವರ ಒಪ್ಪಂದವನ್ನು ರದ್ದುಗೊಳಿಸಿ ಭದ್ರತಾ ಠೇವಣಿಯನ್ನು ಹಾಗೂ ಮುಂಗಡ ಬಾಡಿಗೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಅವರನ್ನು ಉಪಹಾರ ಗೃಹದಿಂದ ಹೊರಕ್ಕೆ ಹಾಕಲಾಗುವುದು.

25. ಉಪಹಾರ ಗೃಹ ಮಂಜೂರಾತಿ ಪಡೆದವರು ಈ ಮೇಲೆ ತಿಳಿಸಿದ ಕರಾರುಗಳನ್ನು ಉಲ್ಲಂಘಿಸಿದಲ್ಲಿ ಮತ್ತು ಉಪಹಾರ ಗೃಹ ನಿರ್ವಹಣೆಯಲ್ಲಿ ವ್ಯತಿರಿಕ್ತವಾಗಿ ಯಾರಿಂದಲೂ ದೂರುಗಳು ಬಂದಲ್ಲಿ ಕೂಡಲೇ ಉಪಹಾರ ಗೃಹ ಮಂಜೂರಾತಿಯ ಒಪ್ಪಂದ ಪತ್ರವನ್ನು, ಲೈಸನ್ಸ್‌ನ್ನು ರದ್ದು ಪಡಿಸಲಾಗುವುದು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ.

ಜಾವಕ ಸಂಖ್ಯೆಃ /2025

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಗದಗ ದಿನಾಂಕಃ 25.06.2025

**ಪ್ರತಿಗಳು** ಃ

1. ಮಾನ್ಯ ಜಿಲ್ಲಾಧಿಕಾರಿಗಳವರ ಕಚೇರಿ, ಗದಗ.
2. ಜಿಲ್ಲಾ ಪಂಚಾಯತ ಕಚೇರಿ, ಗದಗ.
3. ಕಾರ್ಯಪಾಲಕ ಅಭಿಯಂತರರು, ಲೋ, ಬಂ ಮತ್ತು ಒಜಸಾ ಇಲಾಖೆ, ಗದಗ.
4. ಅಧ್ಯಕ್ಷರು, ಗದಗ ಜಿಲ್ಲಾ ವಕೀಲರ ಸಂಘ, ಗದಗ.
5. ಸಹಾಯಕ ನಿರ್ದೇಶಕರು, **ವಾರ್ತಾ ಮತ್ತು** ಸಾರ್ವಜನಿಕ ಸಂಪರ್ಕ ಇಲಾಖೆ, ಗದಗ.
6. ತಹಶೀಲ್ದಾರ ಕಚೇರಿ, ಗದಗ.
7. ಗದಗ ಬೆಟಗೇರಿ ಮುನ್ಸಿಪಲ್ ಕಾರ್ಪೊರೇಶನ, ಗದಗ.

ಮಾಹಿತಿಗಾಗಿ ಹಾಗೂ ಸೂಚನಾ ಫಲಕಕ್ಕೆ.

ಮುಖ್ಯಆಡಳಿತಾಧಿಕಾರಿಗಳು
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಗದಗ.

# ಪ್ರಕಟಣೆ

ಗದಗ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಉಪಹಾರ ಗೃಹವನ್ನು ಬಾಡಿಗೆ ಆಧಾರದ ಮೇಲೆ ಲೈಸನ್ಸ ನಾತೆಯಿಂದ ನಡೆಸಲು ಅರ್ಜಿ ಅಹ್ವಾನಿಸಲಾಗಿದ್ದು ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗದಗದ ಅಂತರಜಾಲದಲ್ಲಿ ಹಾಗೂ ನ್ಯಾಯಾಲಯದ ಕಛೇರಿಯಲ್ಲಿ ಪಡೆಯತಕ್ಕದ್ದು.

| | | |
|---|---|---|
| 1. | ಭರ್ತಿಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | ಃ 11.07.2025 4.30 ಘಂಟೆಯವರೆಗೆ |
| 2. | ಟೆಂಡರ್ ತೆರೆಯುವ ದಿನಾಂಕ | ಃ 14.07.2025 5.30 ಘಂಟೆಯವರೆಗೆ |
| 3. | ಟೆಂಡರ್ ತೆರೆಯುವ ಸ್ಥಳ | ಃ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗದಗ. |

ಸ್ಥಳಃ ಗದಗ.
ದಿನಾಂಕ ಃ 25.06.2025

25/6/25

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ.